



# ನ್ಯಾನೋ ಕಾರು-ಬಾರು

ಇತ್ತೀಚಿನ ಕೆಲ ವರ್ಷಗಳಿಂದ ಎಲ್ಲಾ ರಂಗದಲ್ಲಿ ನ್ಯಾನೋ ಟೆಕ್ನಾಲಜಿಯ ಮಾತುಗಳೇ ಕೇಳಿ ಬರುತ್ತವೆ.

ಇತಿಹಾಸ ಬಲ್ಲವರಿಗೆ ನ್ಯಾನೋ ಟೆಕ್ನಾಲಜಿ ಶಬ್ದ ಹೊಸದೇನಲ್ಲ. ಟಿಪ್ಪು ಸುಲ್ತಾನ್ ತನ್ನ ಖಡ್ಗವನ್ನು ನ್ಯಾನೋ ಟೆಕ್ನಾಲಜಿಯಲ್ಲಿಯೇ ಮಾಡಿಸುತ್ತಿದ್ದ ಕುರಿತು ವರದಿಯಾಯಿತು. ಅದಕ್ಕೆಂದೇ ಆತನ ಖಡ್ಗಕ್ಕೆ ವೈರಿಗಳ ರುಂಡ ಚೆಂಡಾಡುವ ವಿಶೇಷ ಶಕ್ತಿ ಇತ್ತಂತೆ. ಆ ಕಾಲದಲಿಯೇ ನ್ಯಾನೋ ಇತ್ತೆಂದರೆ.., ಇನ್ನು ವಿಜ್ಞಾನ ಇಷ್ಟೊಂದು ಮುಂದುವರಿದ ದಿನಗಳಲ್ಲಿ ನ್ಯಾನೋ ಟೆಕ್ನಾಲಜಿ ಕುರಿತು ಕೇಳಬೇಕೆ? ನ್ಯಾನೋ ಎನ್ನುವ ಶಬ್ದ ಕುಡಿಯುವ ನೀರಿನಿಂದ ಹಿಡಿದು ಪ್ರತಿಯೊಂದು ರಂಗದಲ್ಲಿ ಪಸರಿಸಿದೆ.

ನಮ್ಮ ನೆಲದಲ್ಲಿ ಟಾಟಾ ಕಂಪನಿಯ ನ್ಯಾನೋ ಖ್ಯಾತಿ ಪಡೆದಂತೆ ವಿದೇಶದಲ್ಲಿ ಕೂಡಾ ನ್ಯಾನೋ ಕಾರುಗಳದ್ದೇ 'ಕಾರ್ ಬಾರ್' ನಡೆಯುತ್ತಿದೆ. ಮೂರು ಗಾಲಿಯ ಕಾರು, ಇಬ್ಬರೇ ಕುಳಿತು ಪ್ರಯಾಣಿಸುವ ಚಿಕ್ಕ ಕಾರುಗಳೇ ಅಲ್ಲಿ ಹೆಚ್ಚು ಜನಪ್ರಿಯತೆ ಪಡೆಯುತ್ತಿವೆ.



ದೂರದ ಕಾಂಬೋಡಿಯಾದಲ್ಲಿ ಜನರೇ ಕಾರುಗಳನ್ನು ನಿರ್ಮಾಣ ಮಾಡಿಕೊಳ್ಳುತ್ತಿದ್ದಾರಂತೆ! ವ್ಹಾವ್. ಇದೆಂತಹ ಟೆಕ್ನಾಲಜಿ ಇರಬಹುದೆಂದು ನಮ್ಮಲ್ಲಿಯ ಕಾರು ನಿರ್ಮಾಣ ಮಾಡುವ ತಜ್ಞರು ಕಾಂಬೋಡಿಯಾ ಕಡೆ ಪ್ರಯಾಣ ಬೆಳೆಸಿರಲೂಬಹುದು. ನಮ್ಮ ಟಾಟಾ ನ್ಯಾನೋ ಕಾರ್ ಕಾಂಬೋಡಿಯಾದ ಹೋಂ ಮೇಡ್ ಕಾರುಗಳ ಮುಂದೆ ನಾಚಿ ತಲೆ ಬಾಗುತ್ತದಂತೆ.



ಸೀರೆಯನ್ನು ಬೆಂಕಿಕಡ್ಡಿ ಪೊಟ್ಟಣದಲ್ಲಿ ಮಡಚಿಟ್ಟಂತೆ ಮುಂದೊಂದು ದಿನ ಕಾರಿನ ಎಲ್ಲ ಭಾಗಗಳನ್ನು ಬಿಡಿ ಬಿಡಿ ಮಾಡಿ ಚೀಲದಲ್ಲಿ ತುಂಬಿ ಹೆಗಲ ಮೇಲೆ ಹೇರಿಕೊಂಡು ಹೋಗುವ ಕಾಲದ ದಿನಗಳು ಬರುವುದು ದೂರ ಉಳಿದಿಲ್ಲ ಎಂದು ಅನಿಸುತ್ತದಲ್ಲವೇ?

■ ವಸಂತ ಮಾಲವಿ